## ಸಿಎಂ ಕುಮಾರಸ್ವಾಮಿ ಅವರ ಎಓರ್ಟಿಕ್ (Aortic) ವಾಲ್ವ್ ರಿಪೇರಿ



ಡಾ. ಸಾತ್ಯಕಿ ಅವರು ನಿರ್ವಹಿಸಿದ ಪ್ರಮುಖ ಸರ್ಜರಿಗಳಲ್ಲಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಹಾರ್ಟ್ ಸರ್ಜರಿಯೂ ಸೇರಿದೆ. ಈ ಸರ್ಜರಿ ಅತ್ಯಂತ ಸಂಕೀರ್ಣವಾಗಿತ್ತು. ಅವರಿಗೆ ಸರ್ಜರಿ ಮಾಡಿದ ವಿಧಾನವನ್ನು 'ರೀಡೂ ಎಂಐಸಿಎಸ್ ಎಓರ್ಟಿಕ್ ವಾಲ್ವ್ ರೀಪ್ಲೇಸ್‌ಮೆಂಟ್' ಎಂದು ಕರೆಯುತ್ತಾರೆ. ಈಗಾಗಲೇ ಕುಮಾರಸ್ವಾಮಿ ಅವರಿಗೆ ಹೃದಯ ಶಸ್ತ್ರಚಿಕಿತ್ಸೆ ಆಗಿತ್ತು. ಆದರೆ ಆರು ವರ್ಷಗಳ ನಂತರ ಕುಮಾರಸ್ವಾಮಿ ಅವರಿಗೆ ಹೃದಯ ಮತ್ತೆ ತೊಂದರೆ ನೀಡಿತ್ತು. ಅವರು ಇಸ್ರೇಲ್‌ಗೆ ನಿಯೋಗದ ಜೊತೆ ಹೋಗಿದ್ದ ಸಂದರ್ಭದಲ್ಲಿ ತೀವ್ರ ಉಸಿರಾಟದ ತೊಂದರೆ ಕಾಣಿಸಿಕೊಂಡಿತ್ತು. ಅವರನ್ನು ಅಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೆಲವು ತುರ್ತು ಚಿಕಿತ್ಸೆಗಳ ನಂತರ ಬೆಂಗಳೂರಿಗೆ ವಾಪಸ್ ಆದ ಕುಮಾರಸ್ವಾಮಿ, ಡಾ. ಸಾತ್ಯಕಿ ನಂಬಳ ಅವರ ಬಳಿ ಚಿಕಿತ್ಸೆಗೆ ದಾಖಲಾದರು. ಈಗಾಗಲೇ ಮಾಡಿಸಿಕೊಂಡ ಹೃದಯದ ಶಸ್ತ್ರಚಿಕಿತ್ಸೆಯ ನಂತರ ಕೆಲವು ಇನ್‌ಫೆಕ್ಷನ್ ಆಗಿದ್ದರಿಂದಲೋ ಏನೋ ಅಂತೂ ಅವರಿಗೆ ಗಂಭೀರ ತೊಂದರೆಯೊಂದು ಇತ್ತು. ಸೋಂಕಿನಿಂದ ತೊಂದರೆಗೀಡಾದ ಹೃದಯದ ಎಓರ್ಟಿಕ್ ವಾಲ್ವ್ ಕಿತ್ತು ಹೊಸದಾಗಿ ಕೃತಕ 'ಟಿಶ್ಯು ವಾಲ್ವ್' ಅನ್ನು ಅವರಿಗೆ ಜೋಡಿಸಲಾಯಿತು. ಸತತ ಎರಡೂವರೆ ಗಂಟೆಗಳ ಕಾಲ ನಡೆಸಿದ ಸೂಕ್ಷ್ಮ ಮತ್ತು ಸಂಕೀರ್ಣವಾದ ಶಸ್ತ್ರಚಿಕಿತ್ಸೆ ಅದಾಗಿತ್ತು. ಕೇವಲ ಹದಿನೈದು ದಿನಗಳ ಆರೈಕೆಯ ನಂತರ ಅವರು ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಅವರೀಗ ಸಂಪೂರ್ಣ ಗುಣವಾಗಿದ್ದಾರೆ.

ಪೆರಿಕಾರ್ಡಿಯಮ್ ಎನ್ನುವ ಪದರನ್ನು (Layer) ತೆರೆದೇ ಹೃದಯದ ಮೇಲೆ ಚಿಕಿತ್ಸೆ ಮಾಡಬೇಕಾಗುತ್ತದೆ. ಆಗ ಹಾರ್ಟ್ ತುಂಬ ಸುರಕ್ಷಿತವಾಗಿರುತ್ತದೆ. ಮೊದಲ ಬಾರಿಗೆ ಶಸ್ತ್ರಚಿಕಿತ್ಸೆ ಎಲ್ಲವೂ ತಾಜಾ ಎನ್ನುವಂತಿರುತ್ತದೆ. ಆದರೆ, ಒಂದು ಬಾರಿ ಸರ್ಜರಿ ಆಗಿ ಮತ್ತೆ ಪೆರಿಕಾರ್ಡಿಯಾ ಓಪನ್ ಮಾಡಿದಾಗ ಅದರಲ್ಲಿನ ಫ್ಲೂಯಿಡ್ ಮತ್ತು ಮಸಲ್ ಅಂದರೆ ಸ್ನಾಯುಗಳು ಒಂದಕ್ಕೊಂದು ಅಂಟಿಕೊಂಡಂತೆ ಇರುವ ಸಾಧ್ಯತೆ ಇರುತ್ತದೆ. ಅಂಥ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ಮಾಡುವುದು ತುಸು ತ್ರಾಸದ ಕೆಲಸವಾಗಿರುತ್ತದೆ. ಒಮ್ಮೊಮ್ಮೆ ಹೃದಯ ಯಾವುದು, ಅದರ ಸುತ್ತಲಿನ ಸ್ನಾಯು ಯಾವುದು ಎನ್ನುವುದು ಗೊಂದಲವಾಗುವಂತಿರುತ್ತದೆ. ಅದನ್ನೆಲ್ಲ ತುಂಬ ಜಾಗರೂಕತೆಯಿಂದ ನಿಗಾವಹಿಸಿ ಮಾಡಬೇಕಾಗುತ್ತದೆ. ಕುಮಾರಸ್ವಾಮಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡುವಾಗ ಎದುರಿಸಿದ ಸ್ಥಿತಿ ಸಂಕೀರ್ಣವೇ ಆಗಿತ್ತು. ನುರಿತ ಮತ್ತು ಅತ್ಯಂತ ಕೌಶಲ ಹೊಂದಿದ ಡಾ. ಸಾತ್ಯಕಿ ನಂಬಳ ಯಾವುದೇ ತೊಂದರೆಗೊಳಗಾಗದಂತೆ ಅದನ್ನು ಸರಿಪಡಿಸಿದ್ದಾರೆ.

### ಮಿನಿಮಲಿ ಇನ್‌ವೇಸಿವ್ ಎಓರ್ಟಿಕ್ (ಮಹಾಧಮನಿ) ವಾಲ್ವ್ ರೀಪ್ಲೇಸ್‌ಮೆಂಟ್



ಇದೊಂದು ಅತ್ಯಾಧುನಿಕ ತಂತ್ರ. ಎಓರ್ಟಿಕ್ ವಾಲ್ವ್ (ಮಹಾಧಮನಿ ಕವಾಟ) ಅನ್ನು ಬದಲಾಯಿಸಲು ಅಥವಾ ರೀಪ್ಲೇಸ್ ಮಾಡಲು ಸೂಕ್ತ ಮತ್ತು ಸುಲಭ ಮಾರ್ಗ. ಇದರಲ್ಲಿ ಎದೆಯೆಲುಬುಗಳನ್ನು ಭೇದಿಸುವುದಿಲ್ಲ. ಅತ್ಯಂತ ಕಮ್ಮಿ ಭಾಗವನ್ನು, ಅಂದರೆ ಎರಡೇ ಇಂಚಿನಷ್ಟು ಎದೆಯ ಭಾಗದಲ್ಲಿ ಛೇದ ಮಾಡಿ ಒಂದು ಕಿಂಡಿಯಂಥ ಮಾರ್ಗದ ಮೂಲಕ ಹೃದಯಕ್ಕೆ ತಲುಪಿ, ದೋಷಯುಕ್ತ ಕವಾಟವನ್ನು (ವಾಲ್ವ್) ಗಮನಿಸಿ, ಪರೀಕ್ಷಿಸಿ ನಂತರ ಹೊಸದಾದ ಕೃತಕ ವಾಲ್ವ್ ಅನ್ನು ಅದಕ್ಕೆ ಜೋಡಿಸುತ್ತಾರೆ.


